ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಸಾಕಷ್ಟು ಹಣ ಒದಗಿಸಲಾಗುತ್ತಿದೆ.

ಆ) ಈವರೆವಿಗೆ ಯಾವ ದೂರುಗಳೂ ಬಂದಿಲ್ಲ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸ್ವಾಮಿ, ಸಾಕಷ್ಟು ಹಣವನ್ನು ಒದಗಿಸಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ೧೯೬೦ ರಿಂದ ೧೯೮೩ನೇ ಇಸವಿಯವರೆಗೆ ನಾನು ತಾಲ್ಲೂಕ್ ಡೆವಲಪ್‌ಮೆಂಟ್ ಅಧ್ಯಕ್ಷನಾಗಿ, ಸದಸ್ಯನಾಗಿ ಸೇವೆ ಸಲ್ಲಿಸತಕ್ಕ ಅವಕಾಶ ಒಕ್ಕಿತು. ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ಈ ಪ್ರದೇಶಗಳಲ್ಲಿ ೧೦ ಎಕರೆಗಿಂತಲೂ ಕಡಿಮೆ ಇರತಕ್ಕವರಿಗೆ ಹೆಚ್ಚು ಹಣ ಕೊಟ್ಟಿರತಕ್ಕಂಥ ವಿಚಾರ ನನಗೆ ತಿಳಿದುಬಂದಿಲ್ಲ. ಮಲೆನಾಡು ಪ್ರದೇಶದಲ್ಲಿ ಏಳು ನೂರು, ಎಂಟುನೂರು ಕೆರೆಗಳಿವೆ. ಈ ಕೆರೆಗಳನ್ನು ರಿಪೇರಿ ಮಾಡದೇ ಹೋದರೆ, ಮಲೆನಾಡು ಪ್ರದೇಶದಲ್ಲಿ ಹಸಿರು ಕ್ರಾಂತಿ ಹೋಗಿ ಬಿಣಕ್ರಾಂತಿ ಆಗುತ್ತದೆ. ಆದುದರಿಂದ ಹೆಚ್ಚು ಹಣ ಒದಗಿಸಬೇಕು. ಇನ್ನುವರೆಗೆ ಯಾವ ದೂರುಗಳೂ ಬಂದಿಲ್ಲವೆಂದು ಹೇಳಿದ್ದೀರಿ. ನಾನು ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್ ಬಂದಾಗ ಈ ವಿಚಾರವನ್ನು ತಿಳಿದೆ. ಕಳೆದ ವರ್ಷ ಕೂಡ ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟ್ ಬಂದಾಗ ಹೂಳು ತೆಗೆಯತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೆ. ಯಾವ ದೂರು ಬಂದಿಲ್ಲವೆಂದು ಹೇಳುವುದನ್ನು ನಾನು ಅಷ್ಟು ಒಪ್ಪತಕ್ಕ ಸ್ಥಿತಿಯಲ್ಲಿಲ್ಲ. ಇನ್ನು ಮುಂದೆ ೧೦ ಎಕರೆಗಿಂತಲೂ ಕಡಿಮೆ ಇರತಕ್ಕ ಪ್ರದೇಶದಲ್ಲಿ ಹೆಚ್ಚು ಹಣ ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಒನೇ ಫೈನಾನ್ಸ್ ಕಮಿಷನ್ ಅವರು ಸಣ್ಣ ಕೆರೆಗಳ ದುರಸ್ತಿಗೆ ಹೆಚ್ಚು ಹಣ ವಿನಿಯೋಗಿಸಬೇಕೆಂದು ಆದೇಶ ಕೊಟ್ಟಿದ್ದಾರೆ. ಅದರ ಪ್ರಕಾರ ನಮ್ಮ ಮೇಲೆ ಹೆಚ್ಚು ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ತಿಪ್ಪಯ್ಯ. ಹೋದಸಾರಿ ಇದೇ ಪ್ರಶ್ನೆ ಕೇಳಿದ್ದೆ. ಕೆರೆಗಳಲ್ಲಿ ಹೂಳು ತೆಗೆಯತಕ್ಕದ್ದು ಲಾಭದಾಯಕವಲ್ಲವೆಂದು ಉತ್ತರ ಬಂದಿತ್ತು. ಲಾಭದಾಯಕವಲ್ಲ ಅಂದರೆ ಕೆರೆಯ ಜಮೀನುಗಳು ಆದರ ಪ್ರಯೋಜನ ಪಡೆಯಬಾರದೆಂಬ ಉದ್ದೇಶದಿಂದ ಹೇಳುತ್ತಾರೋ ಏನೊ ಗೊತ್ತಿಲ್ಲ. ಈ ಕಾರಣದಿಂದ ಮಲೆನಾಡು ಪ್ರದೇಶ ಒಣಗಿ ಹೋಗುತ್ತಿದೆ. ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗಬೇಕು ಎಂಬ ಅಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಆರ್.ಎನ್. ಲಕ್ಷ್ಮೀಪತಿ. ಹೂಳು ತೆಗೆಸುವುದು ಒಳ್ಳೆ ವ್ಯಾಪಾರಿಯಾಗುತ್ತದೆಂದು ಅದನ್ನು ಕೈಬಿಟ್ಟಿದೆ. ಅನೇಕ ಹೊಸ ಕೆರೆಗಳನ್ನು ಮಾಡುವಂತಹ ಸ್ಥಳವಿದೆ ಮತ್ತು ಅವಕಾಶ ಇದೆ. ಈ ಕೆಲಸಗಳು ಆದಮೇಲೆ ಹೂಳು ತೆಗೆಯುವುದು ಅನಿವಾರ್ಯವಾದಾಗ ಅದನ್ನು ಮಾಡಲೆ ಬೇಕಾಗುತ್ತದೆ.

ಸಣ್ಣ ನೀರಾವರಿ ಯೋಜನೆ ಮೇರೆಗೆ ಸಾಧಿಸಿದ ಪ್ರಗತಿ

೪೧೬ (೧೧೬೦) ಶ್ರೀ ಪಿ. ರಾಮಪ್ಪ (ಪುಲ್ಲೇಶ್ವರ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೩-೮೪ರಲ್ಲಿ ಸಣ್ಣ ನೀರಾವರಿ ಯೋಜನೆಗೆ ಮಂಜೂರಾತಿ ಮಾಡಿದ ಹಣವೆಷ್ಟು ?

ಆ) ೧೯೮೩-೮೪ರಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ಸಾಧಿಸಿದ ಪ್ರಗತಿ ಎಷ್ಟು ಮತ್ತು ವಿವರಗಳೇನು ?

ಇ) ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಸಮೀಕ್ಷೆ ನಡೆಸಿದೆಯೇ, ಹಾಗಿದ್ದಲ್ಲಿ ಈ ಸಮೀಕ್ಷೆಯ ವಿವರಗಳೇನು ?

ಈ) ರಾಜ್ಯದ ಸಣ್ಣ ನೀರಾವರಿ ಯೋಜನೆಗಳಿಗೆ ಯಾವ್ಯಾವ ಮೂಲಗಳಿಂದ ಸಹಾಯಧನ ಮತ್ತು ಸಾಲದ ಆಧಾರದ ಮೇಲೆ ಹಣ ನೀಡಲಾಗಿದೆ ?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯಮಂತ್ರಿಗಳು). —

ಆ) ೧೯೮೩–೮೪ರಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಮಂಜೂರಾತಿ ಮಾಡಿದ ಒಟ್ಟು ಹಣದ ಮೊತ್ತ ೨೦೭೯.೦೦ ಲಕ್ಷ ರೂಪಾಯಿಗಳು. ಈ ಕೆಲಸಗಳಿಗಾಗಿ ೧೨೮೯.೦೦ ಲಕ್ಷ ರೂಗಳನ್ನು ಇಡಲಾಗಿದೆ.

ಆ) ೧೯೮೩–೮೪ರಲ್ಲಿ ಸಣ್ಣ ನೀರಾವರಿ ಯೋಜನೆಯಿಂದ ೩೧–೧೨–೧೯೮೪ರ ಅಂತ್ಯದವರೆಗೆ ೧೦೯ಳಳ ಹೆಕ್ಟೇರುಗಳಷ್ಟು ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ ಮತ್ತು ಈ ಕೆಲಸಗಳಿಗೆ ಮಾತ್ರ ೮೧೯.೦೦ ಲಕ್ಷ ರೂ.ಗಳು ಖರ್ಚಾಗಿವೆ.

ಇ) ಸಮೀಕ್ಷೆ ನಡೆದಿದೆ. ಈಗ ಳಖಿಟ ಕೆರೆಗಳ ಸಮೀಕ್ಷೆ ಪೂರೈಸಿದೆ.

ಈ) ೧) ವಿಶ್ವಬ್ಯಾಂಕ್ ನೆರವು.

೨) ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ | ಕೇಂದ್ರ ನೆರವು
೩) ಗಿರಿಜನ ಅಭಿವೃದ್ಧಿ ಯೋಜನೆ |

ಶ್ರೀ ಪಿ. ರಾಮಯ್ಯದೇವ್.—ಸ್ವಾಮಿ, ೧೯೮೩–೮೪ರಲ್ಲಿ ಸಣ್ಣ ನೀರಾವರಿಗೆ ೨೦೭೯ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದ್ದಿರಿ. ಈ ಕೆಲಸಗಳಿಗಾಗಿ ೧೨೮೯ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಿರಿ. ಇಷ್ಟು ಕಡಿಮೆ ಏಕೆ ಕೊಡುತ್ತೀರಿ ? ತಾವು ಖರ್ಚು ಮಾಡಿರತಕ್ಕಂಥದ್ದು ೮೧೯ ಲಕ್ಷ ರೂಪಾಯಿಗಳು. ಏಕೆ ಇಷ್ಟು ಕಡಿಮೆ ಖರ್ಚು ಮಾಡಿದ್ದೀರಿ. ಕೊಟ್ಟಿರತಕ್ಕಂಥ ಹಣವನ್ನು ಏಕೆ ಉಪಯೋಗ ಮಾಡಿಲ್ಲ. ಇದು ಅಧಿಕಾರಿಗಳ ಅದಕ್ಷತೆಯಿಂದ ಹೀಗಾಗಿದೆಯೇ? ತಾವು ೧೦ ಸಾವಿರ ಹೆಕ್ಟೇರ್‌ಗೆ ಮಾತ್ರ ನೀರಾವರಿ ಸೌಲಭ್ಯ ಕೊಟ್ಟಿದ್ದೀರಿ ? ಏಕೆ ಹೀಗೆ ಆಯಿತು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—೨೦ ಕೋಟಿ ಹಣದಲ್ಲಿ ಸಿಬ್ಬಂದಿ ಖರ್ಚು, ಮಿಷನರಿ ಖರ್ಚು ಎಲ್ಲಾ ಸೇರುತ್ತದೆ. ಕೆರೆ ದುರಸ್ತಿಗೆ ಮತ್ತು ಹೊಸ ಕೆರೆಗಳ ನಿರ್ಮಾಣಕ್ಕೆಂದು ೧೨ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತೇವೆ. ಮಾರ್ಚ್ ತಿಂಗಳೊಳಗಾಗಿ ೨–೩ ಕೋಟಿ ಖರ್ಚು ಮಾಡುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪಿ. ರಾಮಯ್ಯದೇವ್.—ತಾವು ಕೆರೆಗಳ ಸಮೀಕ್ಷೆ ಮಾಡಿದ್ದೇವೆಂದು ಹೇಳಿದಿರಿ. ಕೇವಲ ಳಖಿಟ ಕೆರೆಗಳ ಸಮೀಕ್ಷೆ ಮಾತ್ರ ಮಾಡಿದ್ದೀರಿ. ಎಲ್ಲಾ ಕೆರೆಗಳ ಬಗ್ಗೆ ಸಮೀಕ್ಷೆ ಏಕೆ ನಡೆಸಿಲ್ಲ ? ವಿಶ್ವಬ್ಯಾಂಕ್‌ಗೆ ಎಷ್ಟು ಹಣ ಕೇಳಿದ್ದೀರಿ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಮತ್ತು ಗಿರಿಜನ ಅಭಿವೃದ್ಧಿ ಯೋಜನೆಗೆ ಎಷ್ಟು ಹಣಕೇಳಿದ್ದೀರಿ, ಎಷ್ಟು ಬಂದಿದೆ ಮತ್ತು ವಿಶ್ವಬ್ಯಾಂಕ್‌ನವರು ಏನಾದರೂ ಷರತ್ತುಗಳನ್ನು ಹಾಕಿದ್ದಾರೆಯೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ವಿಶ್ವಬ್ಯಾಂಕಿನವರು ೧೯೮೬–೮೭ನೇ ಸಾಲಿನೊಳಗಾಗಿ ಎಲ್ಲಾ ಕೆರೆಗಳನ್ನು ಪೂರೈಸಬೇಕೆಂದು ಷರತ್ತು ಹಾಕಿದ್ದಾರೆ. ವಿಶ್ವಬ್ಯಾಂಕಿನ ಪ್ರೊಪೀಜರ್ ಬಹಳ ಜಾಸ್ತಿ ಇದೆ. ನಮ್ಮ ರಾಜ್ಯ ಸರ್ಕಾರ ಒಂದು ಟೆಂಡರ್ ಕಾಲ್ಡರ್ ಮಾಡಿದರೆ, ೩೦ ದಿವಸಬೇಕು, ಆದರೆ ಇವರಿಗೆ ೬೦ ದಿವಸಗಳು ಬೇಕು. ಪ್ರತಿಯೊಂದು ಟೆಂಡರನ್ನೂ ಕೇಂದ್ರಸರ್ಕಾರ ಮಂಜೂರಾತಿ ಮಾಡಬೇಕಾಗಿರುತ್ತದೆ. ಆದ್ದರಿಂದ ವಿಳಂಬವಾಗುತ್ತದೆ. ಆದರೂ ಕಾಲಕ್ಕೆ ಸರಿಯಾಗಿ ಮುಗಿಸುತ್ತೇವೆಂದು ಭರವಸೆ ಕೊಡುತ್ತೇನೆ.

ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕಿನಲ್ಲಿ ಕೆರೆ ನಿರ್ಮಾಣದಿಂದ ಮುಳುಗಡೆಯಾಗಿರುವ ಜಮೀನುಗಳಿಗೆ ಪರಿಹಾರ ಕೊಡುವುದು

೪೧೮ (೧೨೮೫) ಶ್ರೀ ಟಿ. ಹೆಚ್. ಹನುಮಂತರಾಯಪ್ಪ (ಬೆಳ್ಳಾವಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೊರಟಗೆರೆ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ೧೯೮೧ ರಿಂದ ಹೊಸದಾಗಿ ಕಟ್ಟಿರುವ ಕೆರೆಗಳ ಸಂಖ್ಯೆ ಎಷ್ಟು ಮತ್ತು ಯಾವಾಗ ಕಟ್ಟಲಾಯಿತು? (ಸಾಲ್ವಾರು ಮಾಹಿತಿ ಕೊಡಬೇಕಾಗಿ ವಿನಂತಿ.)